

‘ಹಾರ್ಸಿಕಟ್ಟಾ’ ಮೊಟಕಾಗಿ ಉತ್ತರಿಸಿದಳು.

‘ಓ... ನಾನ್ ಹೆಗ್ಗರ್ಣಿಗೆ ಹೋಗವ’ ಎಂದು ನಕ್ಕ.

‘ಇವ್ನನ್ನ ಕೇಳ್ದೋರ್ ಯಾರು?’ ಎನ್ನುತ್ತಾ ಮನಸ್ಸಿನಲ್ಲೇ ಬೈದುಕೊಂಡರೂ ನಕ್ಕು ಮಾತಿಗೆ ಇತಿಶ್ರೀ ಬರೆಯುವ ಯತ್ನದಲ್ಲಿದ್ದಳು.

ಮೊಬೈಲ್ ಲಾಂಗ್ ವೈಬ್ರೇಟ್ ಆದಾಗ ನಿನಾದನದೇ ಮೆಸೇಜ್ ಎಂದು ಧಾವಂತದಲ್ಲಿ ತೆರೆದಳು.

‘ಯಾಕೆ? ಇಷ್ಟ್ ಚೆನ್ನಾಗಿ ಬರಿತಿಯಲ್ಲಾ... ಪಾರ್ಟಿಸಿಪೇಟ್ ಮಾಡು. ಈ ಚುಟುಕು ಸಾಲುಗಳು ಬೇಡ, ಒಂದ್ ಪೂರ್ಣ ಕವಿತೆ ಬರೆಯೋಕೆ ಪ್ರಯತ್ನ ಮಾಡು.’

ದೇವರೆ, ಒಂದೇ ಒಂದು ಸಾಲನ್ನು ಅಪ್ಪಿ ತಪ್ಪಿಯೂ ಬರೆಯಲು ಬರದ ನಾನು ಬೆಂಗಳೂರಿಗೆ ಹೋಗಿ ಗೋಷ್ಠಿಯಲ್ಲಿ ಭಾಗವಹಿಸುವುದೆಂದರೇನು? ಇವನಿಗೆ ನಿಜ ಹೇಳಿ ಬಿಡಲಾ... ಯೋಚಿಸಿದಳು. ಅಷ್ಟರಲ್ಲಿ ಪಕ್ಕದ ಸೀಟಿನಲ್ಲಿ ಇರುವವನೊಬ್ಬ ರಿಂಗಾಗುತ್ತಿರುವ ಫೋನ್ ರಿಸೀವ್ ಮಾಡಿಕೊಂಡು,

‘ಇಲ್ಲಾ ಆ ಹೆಗ್ನೂರ್ ಜಮೀನಲ್ಲಿ ಮನೆ ಕಟ್ಟೋದ್ ಬೇಡಾ, ಅದು ಜವ್ಳ ನೆಲ. ಮನೆ ಕಟ್ರೆ ನಿಲ್ಲತ್ತಾ? ನೀರ್ಗಾನ್ ಹತ್ರ ಒಂದ್ ಜಾಗ ನೋಡಾರೆ ನಮ್ ಮಾವ್ನರು, ಅದ್ನೆ ಓಕೆ ಮಾಡುವ...’ ಎಂದು ದೊಡ್ಡದಾಗಿ ಹೇಳಿದ... ಅವಳಿಗೆ ಹಿಂಸೆಯಾದರೂ ಅವನ ಮಾತು ಎಷ್ಟು ಸರಿಯಾಗಿ ತನ್ನ ಮನಃಸ್ಥಿತಿಗೆ ತಾಳೆಯಾಗುತ್ತಿದೆ, ಗೊಂದಲಕ್ಕೆ ಪರಿಹಾರವಾಗುತ್ತಿದೆ... ಎನಿಸಿ, ಅವನತ್ತ ನೋಡಿದಳು, ಅವನು ಕವಳದ ರಸವನ್ನು ಕಿಟಕಿಯಾಚೆಗೆ ಉಗುಳಲು ಪಕ್ಕದಲ್ಲಿ ಕುಳಿತ ಹೆಂಗಸೊಬ್ಬಳ ಬಳಿಯಲ್ಲಿ ‘ಒಂದ್ ಚೂರ್ ಸರ್ಕಳಿ...’ ಎಂದು ಗೋಗರೆಯುತ್ತಿದ್ದ. ಅವಳು ಮುಖ ಸಿಂಡರಿಸಿ ಸರಿದುಕೊಳ್ಳುತ್ತಿದ್ದಳು. ಅಚಲಾಳಿಗೆ ಅವನ ಮುಖ ಸರಿಯಾಗಿ ಕಾಣಿಸಲಿಲ್ಲವಾದರೂ ಅವನ ಮಾತುಗಳು ಹೌದೆನ್ನಿಸಿತು. ಜವುಗು ನೆಲದಲ್ಲಿ ಮನೆ ಕಟ್ಟಲಾಗುವುದಿಲ್ಲ, ಈ ಸುಳ್ಳಿನ ಮೇಲೆ ಬದುಕನ್ನೂ ನಿಲ್ಲಿಸಲಾಗುವುದಿಲ್ಲ. ಟೈಪಿಸಲು ಶುರು ಮಾಡಿದಳು, ಪಕ್ಕದಲ್ಲಿ ಕುಳಿತವನು ನೋಡುತ್ತಲೇ ಇದ್ದ... ನೋಡಿಕೊಳ್ಳಲಿ. ಕ್ಯಾರಿಲ್ಲದೇ ಟೈಪಿಸಿದಳು...

‘ನಂಗೆ ಬರೆಯಲಿಕ್ಕೆ ಬರೋದಿಲ್ಲ... ಇಷ್ಟು ದಿನ ಈ ಸಾಲುಗಳನ್ನೆಲ್ಲ ಬರೆದಿದ್ದು ನಾನಲ್ಲ, ಸಾರಿ...’

‘ನೀನಲ್ವಾ? ಮತ್ಯಾರು?’

‘ಹೇ ತಮಾಷೆ ಮಾಡ್ಬೇಡಾ ಅಚ್ಚು...’ ಆ ಕಡೆಯಿಂದ ಬಂದಿತು.